**Code No. 08 X(D)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2018 | ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ನಮ್ಮ ದೇಶದ ರಾಜ ಮಹಾರಾಜರು ಆಳುತ್ತಿದ್ದ ಪ್ರದೇಶದ ಕಥೆ. ಅಲ್ಲೊಬ್ಬ ವ್ಯಾಪಾರಿಯಿದ್ದ ಅವನು ಸುತ್ತಲು ಜನರ ಪ್ರೀತಿ, ವಿಶ್ವಾಸ, ಸ್ನೇಹ ಸಂಪಾದನೆ ಮಾಡಿದ್ದರಿಂದ ಅವನ ವ್ಯವಹಾರವೂ ಸುಗಮವಾಗಿ ನಡೆಯುತ್ತಿತ್ತು. ಆತ ಯಾವುದೇ ಪ್ರಯಾಸ ಪಡದೇ ನಡೆಸುತ್ತಿದ್ದ ವ್ಯಾಪಾರದಿಂದಲೇ ನಿರೀಕ್ಷೆಗೂ ಮೀರಿ ಸಂಪತ್ತನ್ನು ಸಂಗ್ರಹಿಸಿದ್ದ. ವ್ಯಾಪಾರಿಗೆ ಒಬ್ಬ ಮಗನಿದ್ದ. ಅವನಿಗೆ ಅಪ್ಪನ ಪರಿಶ್ರಮ ಮೌಲ್ಯ ಏನೆಂಬುದೇ ಗೊತ್ತಿರಲಿಲ್ಲ, ತುಂಬಾ ದುಬಾರಿಯಾದ ಬಟ್ಟೆ ಧರಿಸುತ್ತಿದ್ದ, ಅವನ ಉಡುಪಿನಲ್ಲಿ ಶಿಸ್ತೇ ಇಲ್ಲವೇನೋ ಎನ್ನುವಷ್ಟು ದೊಗಳೆ ಆಕಾರದಲ್ಲಿ ಬಟ್ಟೆ ಹೊಲಿಸುತ್ತಿದ್ದ. ಬೇರೆಯವರಿಗೆ ಮೈ ಮುಚ್ಚಲು ತುಂಡು ಬಟ್ಟೆಯೇ ಸಾಕೇನುವ ಪರಿಸ್ಥಿತಿಯಲ್ಲಿ ಇವನು ದುಬಾರಿಯಾದ ಬಟ್ಟೆಯನ್ನು ಅಳತೆಗೆ ಮೀರಿ ಹೊಲಿಸಿಕೊಳ್ಳುತ್ತಿದ್ದ. ತುಂಬಾ ಮೌಲ್ಯದ ಬಟ್ಟೆ ನನಗೆಷ್ಟು ಅಗ್ಗ ನೋಡಿ ಎನ್ನುವಂತಿತ್ತು ಅವನ ಧೋರಣೆ, ಆದರೂ, ಜನ ಅವನ ಕಡೆ ಅಷ್ಟಾಗಿ ಗಮನಕೊಡುತ್ತಿರಲಿಲ್ಲ.

ಅದೇ ಊರಿನಲ್ಲಿದ್ದ ಯುವಕನೊಬ್ಬ ತನ್ನ ಉಡುಗೆ ತೊಡುಗೆಯಿಂದೆಲ್ಲರ ಗಮನಸೆಳೆದಿದ್ದ. ಇದು ವ್ಯಾಪಾರಿ ಮಗನಿಗೆ ಸಿಟ್ಟು ತರಿಸಿತು. ಆ ಯುವಕನನ್ನು ಕರೆಸಿ ನೋಡಿದರೆ, ಆತ ತೀರಾ ಸಾಧಾರಣವಾದ ಬಟ್ಟೆ ಧರಿಸಿದ್ದ ವ್ಯಾಪಾರಿಯ ಮಗನಿಗೆ ಇಲ್ಲಿನ ಜನರಿಗೆ ಅಭಿರುಚಿಯೇ ಇಲ್ಲವೆನಿಸಿತು. ಆದರೂ, ತನ್ನ ಶ್ರೀಮಂತಿಕೆಯ ಬಟ್ಟೆ ಏಕೆ ಜನರನ್ನು ಆಕರ್ಷಿಸುತ್ತಿಲ್ಲ ಎನ್ನುವ ಕೊರಗು ಅವನನ್ನು ಬೆಂಬಿಡದೇ ಕಾಡಲಾರಂಭಿಸಿತು. ಒಮ್ಮೆ ದೇವಸ್ಥಾನದ ಬಳಿಯಿದ್ದ ಗುರುವೊಬ್ಬರ ಬಳಿ ಹೋಗಿ ಕೇಳಿದ. ಗುರುಗಳೇ, ನಾವು ನಿಮಗೆ ಕೇಳಿದಕ್ಕಿಂತೆಚ್ಚು ಕಾಣಿಕೆ ಕೊಟ್ಟಿದ್ದೇವೆ. ನಿಜ ಹೇಳಿ ಜನ ನನ್ನ

[ Turn over

ಬಟ್ಟೆಯನ್ನೇಕೆ ಇಷ್ಟಪಡುತ್ತಿಲ್ಲ, ಆ ಸಾಮಾನ್ಯ ಯುವಕ ಹಾಕುವ ಸಾಧಾರಣ ಬಟ್ಟೆಯ ಬಗ್ಗೆ ಮಾತನಾಡುತ್ತಾರೇಕೆ ಎಂದು ಪ್ರಶ್ನಿಸಿದ. ನಿನ್ನಲ್ಲಿ ನೀನು ಶ್ರೀಮಂತ ಎನ್ನುವ ಅಹಂ ಇದೆ, ಇರಲಿ, ಆದರೂ ನೀನಿನ್ನೂ ಯುವಕ. ತಿದ್ದಿಕೊಳ್ಳಲು ಅವಕಾಶವಿದೆವೆನ್ನುವ ಭರವಸೆಯಿಂದ ಹೇಳುತ್ತಿದ್ದೇನೆ. ನೀನಾಕಿರುವ ಬಟ್ಟೆ ಉತ್ತಮ ಗುಣಮಟ್ಟದ್ದೂ, ಹೆಚ್ಚು ಮೌಲ್ಯಯುತವಾಗಿದ್ದರೂ ನೀನು ಬಟ್ಟೆ ಹೊಲಿಸಿರುವ ರೀತಿ ನೋಡುಗರ ಕಣ್ಣೋಟಕ್ಕೆ ಹಿತಕರವಾಗಿಲ್ಲ.

ಬಡ ಹುಡುಗ ಕಡಿಮೆ ಬೆಲೆಯ ಬಟ್ಟೆ ತೊಟ್ಟಿದ್ದರೂ, ಅವನ ದೇಹಕ್ಕೊಪ್ಪುವಂತೆ ಹೊಲಿಸಿದ್ದಾನೆ. ಅವನಿಗೂ, ಕಡಿಮೆ ಬೆಲೆಯ ಬಟ್ಟೆಗೂ ಮೌಲ್ಯ ತಂದುಕೊಟ್ಟಿದೆ. ನೀನೂ ಕೂಡಾ ನಿನ್ನಾಳತೆಗೆ ಸರಿಯಾಗಿ ಬಟ್ಟೆ ಹೊಲಿಸಿಕೋ. ಇದೊಂದು ಸರಳ ವಿಚಾರವೆಂದರು. ಸಂಗೀತ ಬಲ್ಲ ವಿದ್ವಾಂಶ ತನಗೆ ಸಂಗೀತ ಗೊತ್ತೆಂದು ಸದಾ ಹಾಡುತ್ತಲಿದ್ದರೆ ಕೇಳುವವರು ಯಾರು, ಒಬ್ಬ ನೃತ್ಯಪಟು ನನಗೆ ನೃತ್ಯ ಗೊತ್ತೆಂದು ಸದಾ ಕುಣಿಯುತ್ತಲಿದ್ದರೆ ನೋಡುವವರು ಯಾರು, ತಾನೇಲ್ಲ ಬಲ್ಲ ಪಂಡಿತ ಎಂದು ಸದಾ ಮಾತನಾಡುತ್ತಲಿದ್ದರೆ ಆಲಿಸುವವರು ಯಾರು. ಇದೆಲ್ಲ ವಿಷಯಕ್ಕೂ ಅನ್ವಯಿಸುತ್ತದೆ. ನಮ್ಮಲ್ಲಿ ಏನೇ ಇದ್ದರೂ ಅದನ್ನು ಸ್ವೀಕರಿಸುವ, ಮನ್ನಣೆ ನೀಡುವ ಜನವಿರಬೇಕು. ಇಲ್ಲವಾದಲ್ಲಿ ನಮ್ಮಲ್ಲಿರುವ ಯಾವುದಕ್ಕೂ ಬೆಲೆ ಬರುವುದಿಲ್ಲ, ಹಾಗೆ ಜನಮನ್ನಣೆ ಸಿಗಬೇಕಾದರೆ ಪ್ರತಿಯೊಂದು ಔಚಿತ್ಯವಿಲ್ಲದೇ ಪ್ರದರ್ಶಿಸುವ ಏನನ್ನೂ ಜನ ಸ್ವೀಕರಿಸಲಾರರು.

ಸಾಮಾನ್ಯವಾಗಿ ಮನುಷ್ಯನ ರೂಪ ಸೌಂದರ್ಯ ಹಾಗೂ ವೇಷ ಭೂಷಣ ಇತ್ಯಾದಿಗಳು ವ್ಯಕ್ತಿಗಳನ್ನು ಜನರು ಗೌರವಿಸುತ್ತಾರೆ. ಒಬ್ಬ ವ್ಯಕ್ತಿಯು ನೋಡಲು ಸುಂದರನಾಗಿದ್ದು, ಆತ್ಯಾಧುನಿಕ ಪ್ಯಾಂಟ್, ಶರ್ಟ್ ಧರಿಸಿ ಕೈಯಲ್ಲಿ ಆಕರ್ಷಕ ಕೈಗಡಿಯಾರ ಕಟ್ಟಿಕೊಂಡು ಬಂದರೆ ಯಾರೇ ಅಧಿಕಾರಿ, ಇಲ್ಲವೇ ಅಧಿಕಾರಿಯ ಪುತ್ರನಿರಬೇಕೆಂದು ಭಾವಿಸಿ ಎಲ್ಲರೂ ಗೌರವಾದರಗಳಿಂದ ಬರಮಾಡಿಕೊಳ್ಳುತ್ತಾರೆ. ಒಬ್ಬ ವ್ಯಕ್ತಿಯ ಹಿರಿಮೆಯನ್ನು ಗುರುತಿಸುವಲ್ಲಿ ಯಾವುದು ಮುಖ್ಯವೆಂಬುದನ್ನು ನಿರೂಪಿಸುವ ಒಂದು ನಿದರ್ಶನವಿದು. ಸಾಮಾನ್ಯವಾಗಿ ವ್ಯಕ್ತಿಯ ರೂಪ ಸೌಂದರ್ಯ, ಬಾಹ್ಯಾಡಂಬರಗಳನ್ನು ನೋಡಿ ಗೌರವ ನೀಡುವುದು ಸರಿಯಲ್ಲ, ವ್ಯಕ್ತಿಯ ಸದ್ಗುಣವನ್ನು ಗಮನಿಸಿ ಗೌರವ ನೀಡಬೇಕು.